ಮತ್ತು ಸಾಮಾನ್ಯ ಪದ ಬಳಕೆಯಾಗುವಂತೆ ನೋಡಿಕೊಳ್ಳಲು ಪರಿಷ್ಕರಣ ಕಾರ್ಯವನ್ನು ಸರಳೀಕರಣ ಸಮಿತಿಯಿಂದ ಮಾಡಿಸುವುದು..

14) ಪ್ರಾಚೀನ ಕರ್ನಾಟಕದಲ್ಲಿ ಆಡಳಿತ ಶಬ್ದಕೋಶದ ಮುದ್ರಣ.

15) ಆಡಳಿತ ಭಾಷೆಯಾಗಿ ಕನ್ನಡ ಬಳಕೆಗೆ ಪೂರಕವಾಗುವ ಪುಸ್ತಕಗಳನ್ನು ಸಿದ್ಧಪಡಿಸಿ ಎಲ್ಲಾ ಕಚೇರಿಗಳಿಗೂ ಪೂರೈಸುವುದು.

16)ಇಂಗ್ಲೀಷಿನಲ್ಲಿರುವ ಮೂಲಭೂತ ಕಾನೂನು ಪುಸ್ತಕಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಪ್ರಕಟಿಸುವುದು. ಈ ಯೋಜನೆಯನ್ನು ರಾಜ್ಯದ ಮೈಸೂರು, ಕರ್ನಾಟಕ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳಿಗೆ ವಹಿಸಲಾಗಿದೆ.

17) ಸಗಟು ಖರೀದಿ ಯೋಜನೆ ಅನುಷ್ಠಾನಕ್ಕೆ ತರುವುದು.

18) ಪುಸ್ತಕ ಪ್ರಾಧಿಕಾರದ ಸ್ಥಾಪನೆ.

19) ಕನ್ನಡ ಭವನ ನಿರ್ಮಾಣ.

20) ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿಯೋಜಿಸುವುದು.

21) ಕನ್ನಡದ ಶ್ರೇಷ್ಟ ಕೃತಿಗೆ "ಆದಿ ಕವಿ ಪಂಪ"ನ ಹೆಸರಿನಲ್ಲಿ ಪ್ರತಿ ವರ್ಷ "ಪಂಪ ಪ್ರಶಸ್ತಿ" ನೀಡುವುದು.

ಪ್ರತಿ ಹಳ್ಳಿಗಳಲ್ಲೂ ಶೌಚಾಲಯ ನಿರ್ಮಿಸುವ ಬಗ್ಗೆ.

291-ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿ ಹಳ್ಳಿಗಳಲ್ಲೂ ಶೌಚಾಲಯ ನಿರ್ಮಿಸಲು ಸರ್ಕಾರವು ಕ್ರಮವನ್ನೇಕೆ ತೆಗೆದುಕೊಂಡಿಲ್ಲ?

ಆ) ಪ್ರತಿ ಹಳ್ಳಿಗಳಲ್ಲೂ ಶೌಚಾಲಯ ನಿರ್ಮಿಸುವ ಬಗ್ಗೆ ಸರ್ಕಾರ ತ್ವರಿತ ಕ್ರಮ ಕೈಗೊಳ್ಳಲು ತೀರ್ಮಾನಿಸಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಈ ಕಾರ್ಯಕ್ರಮವನ್ನು ಹಂತ ಹಂತದಲ್ಲಿ ಕಾರ್ಯಗತಗೊಳಿಸಲು ಸರ್ಕಾರ ಉದ್ದೇಶಿಸಿದೆ.

ಆ) ಹೌದು.

ಹಳ್ಳಿಗಳಲ್ಲಿ ಸ್ಮಶಾನಕ್ಕಾಗಿ ಜಾಗಗಳನ್ನು ಮೀಸಲಿಡುವ ಬಗ್ಗೆ.

290-ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿ ಹಳ್ಳಿಗಳಲ್ಲೂ ಸ್ಮಶಾನಕ್ಕಾಗಿ ಜಾಗವನ್ನು ಮೀಸಲಾಗಿಡಲು ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಜಿಲ್ಲಾ ಪರಿಷತ್ ಕಾಯ್ದೆ ಕಲಂ 56(1)(ಎ)(8)ರನ್ವಯ ರುದ್ರಭೂಮಿ ಮತ್ತು ಸ್ಮಶಾನಗಳ ನಿರ್ವಹಣೆಯು ಮಂಡಲ ಪಂಚಾಯ್ತಿಗಳ ಪ್ರಕಾರ್ಯಗಳಲ್ಲಿ ಒಂದಾಗಿರುತ್ತದೆ.